**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 10.08.2026**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಸಿ ಎಸ್ ವಕೀಲರಿಂದ**

1. ಮದುವೆಯಾಗಿದಿಂದಾಲೂ ಆರೋಪಿ ಕಡೆಯಿಂದ ಯಾವುದೆ ಗಲಾಟೆ ಹಾಗೂ ಮಾನಸಿಕ ಮತ್ತು ದೈಹಿಕ ಹಿಂಸೆ ಆಗಿರುವುದಿಲ್ಲ ಎಂದರೆ ಸರಿ. ನಾನು ಮತ್ತು ಆರೋಪಿಯು ಇಚ್ಚಾನುಸಾರವಾಗಿ ಬೇರೆ ಬೇರೆ ವಾಸವಾಗಿರುತ್ತೇವೆ ಎಂದರೆ ಸರಿ . ಆರೋಪಿಯು ಕುಡಿದು ಬಂದು ಯಾವುದೆ ರೀತಿ ದೈಹಿಕ ಮತ್ತು ಮಾನಸಿಕ ಹಿಂಸೆ ಮಾಡಿರುವುದಿಲ್ಲ ಎಂದರೆ ಸರಿ . ಆರೋಪಿಯು ನನಗೆ ಯಾವುದೆ ವರದಕ್ಷಿಣೆ ಕಿರಕುಳ ಕೊಟ್ಟಿರುವುದಿಲ್ಲ ಎಂದರೆ ಸರಿ . 2 ರಿಂದ 7 ನೇ ಆರೋಪಿಗಳು 1 ನೆ ಆರೊಪಿಗೆ ಪಿರ್ಯಾದುದಾರರಿಂದ ವರದಕ್ಷಿಣೆ ತರಿಸಲು ಯಾವುದೆ ಕುಮ್ಮಕ್ಕು ನೀಡಿರುವುದಿಲ್ಲ ಎಂದರೆ ಸರಿ . 1 ರಿಂದ 8 ನೆ ಆರೋಪಿಗಳು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿ . ಅದೆ ರೀತಿ ನನ್ನ ತಂದೆ ತಾಯಿ 1 ನೆ ಆರೋಪಿ ಗೆ ನನ್ನನ್ನು ಚೆನ್ನಾಗಿ ನೋಡಿಕೊ ಎಂದು ಯಾವುದೆ ಬುದ್ದಿವಾದ ಹೇಳಿರುವುದಿಲ್ಲ ಎಂದರೆ ಸರಿ . ಅದೆ ರೀತಿ 1 ನೇ ಆರೋಪಿಗೆ 2 ನೆ ಆರೋಪಿ ಜೊತೆ ಯಾವುದೆ ಅಕ್ರಮ ಸಂಬಂಧ ಇರುವುದಿಲ್ಲ ಎಂದರೆ ಸರಿ .

2. ಅದೆ ರೀತಿ 1 ನೆ ಆರೋಪಿಯು ನನಗೆ ವಿಚ್ಚೇಧನ ಕೊಡಿ ಎಂದು ಯಾವುದೆ ರೀತಿ ತೊಂದರೆ ಮಾಡಿರುವುದಿಲ್ಲ ಎಂದರೆ ಸ ರಿ . 2 ರಿಂದ 7 ನೆ ಆರೋಪಿ ಗಳಿಂದ ಯಾವುದೆ ಸಂದರ್ಭದಲ್ಲಿ ಯಾವುದೆ ರೀತಿ ಗಲಾಟೆ ಹಾಗೂ ಮಾತುಕತೆಯಾಗಲಿ , ರಾಜಿ ತೀರ್ಮಾನವಾಗಲಿ ಯಾವುದು ಕೂಡ ಸಂಭವಿಸಿರುವುದಿಲ್ಲ ಎಂದರೆ ಸರಿ . ಅದೆ ರೀತಿ ದಿಃ

04.01.2019 ರಂದು 3 ರಿಂದ 7 ನೆ ಆರೋಪಿ ಗಳು ನನ್ನನ್ನು ಹೊಡೆದು ಹೊರಗಡೆ ಹಾಕಿರುವುದಿಲ್ಲ ಎಂದರೆ ಸರಿ . ಅದೆ ರೀತಿ ದಿಃ 05.01.2019 ರಂದು ಪೊಲಿಸ ಠಾಣೆಗೆ ದೂರು ದಾಖಲಿಸಿರುವುದಿಲ್ಲ ಎಂದರೆ ಸರಿ . ದಿಃ 09.01.2019 ರಂದು ನಾನು ಪೋಲಿಸ್ ಅಧೀಕ್ಷಕರಿಗೆ ಯಾವುದೆ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ . ಅದೆ ರೀತಿ ದಿಃ 14.01.2019 ರಂದು ಸಿ ಡಿ ಪಿ ಒ ಕಚೇರಿಗೆ 1 ರಿಂದ 7 ನೆ ಆರೋಪಿಗಳ ವಿರುದ್ಧ ಯಾವುದೆ ದೂರನ್ನು ನೀಡಿರುವುದಿಲ್ಲ ಎಂದರೆ ಸರಿ . ಆರೋಪಿಗಳನ್ನು ಕರೆದು ವಿಚಾರಣೆ ಮಾಡಿರುವುದಾಗಲಿ ಯಾುವುದೆ ಇಲ್ಲ ಎಂದರೆ ಸರಿ .

3. ಅದೆ ರೀತಿ 3 ರಿಂದ 8 ನೆ ಆರೋಪಿ ಗಳು 2 ನೆ ಆರೋಪಿ ಯೊಂದಿಗೆ ಮದುವೆ ಮಾಡಿಸಲು ಜೊತೆ ಕೊಟ್ಟಿರುವುದಿಲ್ಲ ಎಂದರೆ ಸರಿ . 2 ನೆ ಆರೋಪಿ ನನ್ನ ಸ್ವಂತ ತಂಗಿ ಎಂದರೆ ಸರಿ . 1 ಮತ್ತು 2 ನೆ ಆರೋಪಿಗಳಿಗೆ ಮಗು ಇರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ . ಈ ಪ್ರಕರಣಕೊಸ್ಕರ ಹಾಜರುಪಡಿಸಿರುವ ದಾಖಲಾತಿಗಳು ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ